**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ**
**ಚನ್ನಪಟ್ಟಣ.**
**ಸಿ.ಸಿ. ಸಂಖ್ಯೆ:137/2022**

ಚಾಸಾ:1 ಪ್ರಾಸಾ:1

| | | |
|---|---|---|
| ಹೆಸರು | : | ಜಮ್ ಶೀದ್ ಉಲ್ಲಾ ಖಾನ್ |
| ಗಂಡನ/ತಂದೆಯ ಹೆಸರು | : | ಶಫೀ ಉಲ್ಲಾ ಖಾನ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಎಂ ಕೆ ದೊಡ್ಡಿ. |

**ದಿನಾಂಕ 29.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ಆರೋಪಿ ಗೊತ್ತಿಲ್ಲ. ಆರೋಪಿ ಕಳ್ಳತನ ಮಾಡಲು ಪ್ರಯತ್ನಿಸಿದ ಬಗ್ಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಮಹಜರ್ ಅನ್ನು ನಿಪಿ-**1** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ಪಾಟೀ ಸವಾಲು: ಎಪಿಪಿಯವರಿಂದ:**

ದಿನಾಂಕ 05.12.2021 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ-5 ರವರನ್ನು ಕರೆಯಿಸಿ ದಿ:05.12.2021 ರಂದು ಮೈಲನಾಯಕನಹೊಸಹಳ್ಳಿ ಗ್ರಾಮದ ಪಂಚಾಯತಿ ವತಿಯಿಂದ ಅಳವಡಿಸಿದ ಸೋಲಾರ್ ಲೈಟಿನ ಬ್ಯಾಟರಿ ಕಳ್ಳತನ ಮಾಡಲು ಪ್ರಯತ್ನಿಸಿದ ಆರೋಪಿಯಿಂದ ಕೆ ಎ 01 ಡಬ್ಲ್ಯೂ 7727 ಸಿ ಕೆ ಸೂಪರ್ ಎಕ್ಸ್ ಎಲ್ ಬೈಕ್ ಮತ್ತು ಒಂದು Scroo Driver, one cutting player ಗಳನ್ನು ಪೋಲಿಸರು ಮುಂದಿನ ತನಿಖೆಗಾಗಿ ನನ್ನ ಸಮಕ್ಷಮ

ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ5 ರವರು ಸಂಜೆ 5.-30-6.00 ಗಂಟೆಯವರೆಗೆ ಅಮಾನತ್ತು ಪಂಚನಾಮೆಗೆ ಹಾಜರಾಗಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಆರೋಪಿ ಜೊತೆ ರಾಜಿ ಮಾಡಿಕೊಂಡು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**